## ಪ್ರಾರ್ಥನೆ

# ಮನೀಷಾ ಪಂಚಕಮ್ - ೨



**ಯಾ ತಿರ್ಯಙ್ನರದೇವತಾಭಿರಹಮಿತ್ಯಂತಃ ಸ್ಫುಟಾ ಗೃಹ್ಯತೇ**
**ಯದ್ಭಾಸಾ ಹೃದಯಾಕ್ಷದೇಹವಿಷಯಾ ಭಾಂತಿ ಸ್ವತೋಽಚೇತನಾಃ ।**
**ತಾಂ ಭಾಸ್ಯೈಃ ಪಿಹಿತಾರ್ಕಮಂಡಲನಿಭಾಂ ಸ್ಫೂರ್ತಿಂ ಸದಾ ಭಾವಯನ್**
**ಯೋಗೀ ನಿರ್ವೃತಮಾನಸೋ ಹಿ ಗುರುರಿತ್ಯೇಷಾ ಮನೀಷಾ ಮಮ ॥ ೪॥**

ಯಾವ ಚೈತನ್ಯಪ್ರಕಾಶವನ್ನು ತಿರ್ಯಗ್ಜಂತುಗಳು, ಮನುಷ್ಯರು, ದೇವತೆಗಳು — ಎಲ್ಲರೂ 'ನಾನು' ಎಂದು ಸ್ಪಷ್ಟವಾಗಿ ಗ್ರಹಿಸುತ್ತಿರುವರೊ, ಯಾವುದರ ಪ್ರಕಾಶದಿಂದ ಮನಸ್ಸು ಇಂದ್ರಿಯಗಳು ದೇಹ ವಿಷಯ ವಸ್ತುಗಳು — ಇವು ತಾವು ಅಚೇತನವಾಗಿದ್ದರೂ ಬೆಳಗುತ್ತಿರುವುವೋ, ಪ್ರಕಾಶಿಸಲ್ಪಡುವ (ಮೋಡವೇ ಮುಂತಾದ) ವಸ್ತುಗಳಿಂದ ಮರೆಯಾಗಿರುವ ಸೂರ್ಯಮಂಡಲದಂತೆ ಇರುವ ಆ ಚೈತನ್ಯಪ್ರಕಾಶವನ್ನು ಸದಾ ಯೋಚಿಸುತ್ತಾ ಮನದಲ್ಲಿ ಆನಂದದಿಂದ ಇರುತ್ತಿರುವ ಜ್ಞಾನಯೋಗಿಯೇ ಗುರುವು ಎಂಬುದು ನನ್ನ ಮತವು.

**ಯತ್ಸೌಖ್ಯಾಂಬುಧಿಲೇಶಲೇಶತ ಇಮೇ ಶಕ್ರಾದಯೋ ನಿರ್ವೃತಾಃ**
**ಯಚ್ಚಿತ್ತೇ ನಿತರಾಂ ಪ್ರಶಾಂತಕಲನೇ ಲಬ್ಧ್ವಾ ಮುನಿರ್ನಿರ್ವೃತಃ ।**
**ಯಸ್ಮಿನ್ನಿತ್ಯಸುಖಾಂಬುಧೌ ಗಲಿತಧೀರ್ಬ್ರಹ್ಮೈವ ನ ಬ್ರಹ್ಮವಿದ್**
**ಯಃ ಕಶ್ಚಿತ್ಸ ಸುರೇಂದ್ರವಂದಿತಪದೋ ನೂನಂ ಮನೀಷಾ ಮಮ ॥ ೫ ॥**

ಯಾವ ಆನಂದದ ಅತ್ಯಲ್ಪ ಭಾಗದಿಂದ ಈ ಇಂದ್ರಾದಿ ದೇವತೆಗಳೂ ಸುಖಿಗಳಾಗಿರುವರೋ, ಸಂಪೂರ್ಣವಾಗಿ ಕಲ್ಪನೆಗಳೆಲ್ಲ ಅಡಗಿ ಹೋಗಿರುವ ಚಿತ್ತದಲ್ಲಿ ಯಾವುದನ್ನು ಪಡೆದುಕೊಂಡ ಮುನಿಯು ಸುಖಿಯಾಗಿರುವನೋ, ನಿತ್ಯವಾದ ಯಾವ ಆನಂದಸಾಗರದಲ್ಲಿ ಮನಸ್ಸನ್ನು ಲಯಗೊಳಿಸಿಕೊಂಡಿದ್ದರಿಂದ ಯಾವನು ಬ್ರಹ್ಮವಿದನಲ್ಲದೆ ಬ್ರಹ್ಮವೇ ಆಗಿರುವನೋ, ಅಂಥವನು ಯಾವನೇ ಆಗಿರಲಿ, ಅವನು ನಿಜವಾಗಿ ದೇವೇಂದ್ರನಿಗೂ ನಮಸ್ಕರಿಸಲು ಯೋಗ್ಯವಾದ ಪಾದಗಳುಳ್ಳವನು ಎಂಬುದು ನನ್ನ ಮತವು.

**—ಶ್ರೀ ಶಂಕರಾಚಾರ್ಯ**


## ಸೂಕ್ತಿಪ್ರಭ

# ರಷ್ಯನ್ ಸೂಕ್ತಿಗಳು



ಕೆಡುಕೆಂಬುದು ಮಾನವನ ಸಹಜಾವಸ್ಥೆ ಎಂದು ನಾನೆಂದಿಗೂ ನಂಬಲಾರೆ; ಅದು ನನಗೆ ಇಷ್ಟವೂ ಇಲ್ಲ.

**-ಫ್ಯೊದೋರ್ ದೊಸ್ತೊವ್‌ಸ್ಕಿ**



ಸರಳತೆ, ಒಳ್ಳೆಯತನ ಹಾಗೂ ಸತ್ಯಗಳಿಲ್ಲದಲ್ಲಿ ಯಾವ ಶ್ರೇಷ್ಠತೆಯೂ ಇರುವುದಿಲ್ಲ.

**-ಲಿಯೋ ಟಾಲ್‌ಸ್ಟಾಯ್**



ಎಲ್ಲ ಸೌಂದರ್ಯಕ್ಕೂ ಇನ್ನೆಲ್ಲೋ ಅದನ್ನು ನೋಡುವ ಒಂದು ಕಣ್ಣಿರಬೇಕು. ಎಲ್ಲ ಸತ್ಯಕ್ಕೂ ಅದನ್ನು ಕೇಳುವ ಕಿವಿ ಎಲ್ಲೋ ಇರಬೇಕು. ಎಲ್ಲ ಪ್ರೀತಿಗೂ ಅದನ್ನು ಸ್ವೀಕರಿಸುವ ಹೃದಯ ಎಲ್ಲೋ ಒಂದೆಡೆ ಇರಬೇಕು.

**-ಇವಾನ್ ಪಾನಿನ್**

ನಮ್ಮ ಜೀವನದೊಂದಿಗೆ ಸದಾ ಹೆಣೆಯಲಾದ ದುಃಖಗಳ ನಡುವೆ
ಎಲ್ಲೋ ಉಜ್ಜ್ವಲ ಬೆಳಕು ಮಿಂಚಿ ಮರೆಯಾಗುವುದು.



**-ನಿಕೊಲ್ಯಾ ಗೊಗೊಲ್**



'ಏನೇನು ಇವೆಯೋ ಅವೆಲ್ಲ ಏಕಿವೆ?' ಎಂದು ಪ್ರಶ್ನಿಸುವುದು ಎಷ್ಟೊಂದು ಅಸಹಜವೋ, ಅಂತೆಯೇ 'ಜೀವಂತವಾಗಿರುವವು ಏಕೆ ಸಾಯುತ್ತವೆ?' ಎಂದು ಪ್ರಶ್ನಿಸುವುದೂ ಅಷ್ಟೇ ಸಹಜ.

**-ನಿಕೊಲ್ಯಾ ಫ್ಯೋದೊರೊವ್**